ವಿವೇಚಿಕೆ

ವಾರಪತ್ರಿಕೆ, ಸಂಪಾದಕ: ಸಿರಿಮನೆ ನಾಗರಾಜ್

ಖಾಸಗಿ ಪ್ರಸಾರಕ್ಕೆ   ಕೊಪ್ಪ ೧೧-೪-೮೨ ಭಾನುವಾರ

ದಲಿತ ಐಕ್ಯತಾ ದಿನ

[illegible] ... ಅಂಬೇಡ್ಕರ್ ... [illegible] ... ಈ ದೇಶಕ್ಕೆ ಸ್ವಾತಂತ್ರ್ಯ ಬಂದು ... [illegible] ... ಸಾಮಾಜಿಕ ... [illegible]

... ದಲಿತರು ... [illegible] ... ಜನರ ... [illegible] ... ಯುವಕರು ... [illegible]

ಈ ... [illegible] ... ಧರ್ಮ ... [illegible] ... ದಲಿತರು ಎಲ್ಲಾ ... [illegible] ... ಕರ್ನಾಟಕ ದಲಿತ ಸಂಘರ್ಷ ಸಮಿತಿ ಏ. ... [illegible] ... ಐಕ್ಯತಾ ದಿನವಾಗಿ ಆಚರಿಸುತ್ತದೆ.

ನೀರುದರ: ಮಂತ್ರಿಗೆ ಮೊರೆ

ಶೃಂಗೇರಿ: ರೈತರ ಜಮೀನಿಗೆ ಬಳಕೆಯಾಗುವ ನೀರಿಗೆ ಸರ್ಕಾರ ನಿಗದಿ ಮಾಡಿದ್ದ ಶುಲ್ಕದ ವಸೂಲಿ ಈ ಕ್ಷೇತ್ರದ ಮೂರು ತಾಲೂಕುಗಳಲ್ಲಿ ತೀವ್ರವಾಗಿ ನಡೆಯುತ್ತಿದ್ದು, ನೊಂದ ರೈತರು ಏ. ೫ರಂದು ಜೇಗಾನೆ ರಾಮಯ್ಯನವರನ್ನು ಇಲ್ಲಿನ ಪ್ರವಾಸಿ ಮಂದಿರದಲ್ಲಿ ಭೇಟಿ ಮಾಡಿ ಸಮಸ್ಯೆಯ ವಿವಿಧ ಮುಖಗಳನ್ನು ಅವರಿಗೆ ಪರಿಚಯ ಮಾಡಿ ಕೊಟ್ಟು, ಅವರಿಂದ ಸೂಕ್ತ ಭರವಸೆ ಪಡೆದರು.

ಶೃಂಗೇರಿ ತಾಲೂಕಿನಲ್ಲಿ ೭೪-೭೫ರಿಂದ ೭೯-೮೦ರವರೆಗೆ ಮೂರೂವರೆ ಲಕ್ಷ ರೂ.ಗಳ ಬಾಕಿ ಇದೆ. "ನೀರು ಸರಬರಾಜಾಗಿದೆ" ಎಂದು ಲೋಕೋಪಯೋಗಿ ಇಲಾಖೆಯ ಅಸಿಸ್ಟೆಂಟ್ ಇಂಜಿನಿಯರ್ ಮತ್ತು ರೆವಿನ್ಯೂ ಇನ್ಸ್‌ಪೆಕ್ಟರ್ ಒಟ್ಟಿಗೆ ವರದಿ ಮಾಡಿದ್ದಾರೆ. ೧೯೮೦ರಲ್ಲಿ ಜಿಲ್ಲಾಧಿಕಾರಿಗಳು ಭೇಟಿಕೊಟ್ಟಿದ್ದಾಗ ೫ ವರ್ಷದ್ದು ಒಟ್ಟಿಗೆ ವಸೂಲಿ ಮಾಡುವಂತೆ ನಿರ್ದೇಶನ ಕೊಟ್ಟಿದ್ದಾರೆ ಎಂದು ತಹಶೀಲ್ದಾರರು ವಿವರಣೆ ನೀಡಿದಾಗ ಮಂತ್ರಿಗಳು, ಈ ಸಮಸ್ಯೆ ಸಮರ್ಪಕವಾಗಿ ಬಗೆಹರಿಯುವವರೆಗೆ ವಸೂಲಿಯನ್ನು ಸ್ವಲ್ಪ ನಿಧಾನ ಮಾಡುವಂತೆ ತಾವು ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಟ್ಟಿರುವುದಾಗಿ ತಿಳಿಸಿದರು.

ತರಿ-ಬಾಗಾಯ್ತು ಜಮೀನುಗಳನ್ನು ಖುಷ್ಕಿ ಎಂದು ಕಾಣಿಸಿರುವುದು, ಮಳೆ ನೀರಿನ ಆಶ್ರಯದ ಜಮೀನುಗಳನ್ನೂ ನೀರು ಕುಂದಾಯದ ವ್ಯಾಪ್ತಿಗೆ ಒಳಪಡಿಸಿರುವುದು, ಸ್ಥಳ ಪರಿಶೀಲನೆಗೆ ಹೋಗದೆ ಕುಳಿತಲ್ಲಿಂದಲೇ ಜಲಮೂಲ ಗುರ್ತಿಸಿರುವುದು— ಇತ್ಯಾದಿ ಅಸಂಬದ್ಧತೆಗಳನ್ನು ಎತ್ತಿ ಹೇಳಿದ ರೈತರು, 'ಹೆಗ್ಗಡೆಯವರೂ ಮಾಡಿ ಸರ್ಕಾರ ಈ ತೆರಿಗೆ ಕೈ ಬಿಡುವಂತೆ ಮಾಡಿ. ನಮ್ಮನ್ನು ಪುನಃ ಕೋರ್ಟಿಗೆ ಕಳಿಸಬೇಡಿ.' ಎಂದು ವಿನಂತಿಸಿದರು.

ಮಾರ್ಚ್ ತಿಂಗಳಲ್ಲೂ ನೀರು ಕೊಡುವಂಥ ಕೆರೆಯಿದ್ದರೆ ಖಂಡಿತ ಕೆರಿಗೆ ಕೊಡುತ್ತೇವೆ ಎಂದು ಏಕಕಂಠದಲ್ಲಿ ರೈತರು ಘೋಷಿಸಿದರು.

ನ. ರಾ. ಪುರದ ಬಳಿ ಯುವತಿ ಕೊಲೆ

ನ. ರಾ. ಪುರ: ಇಲ್ಲಿಗೆ ಸಮೀಪದ ಚಿಕ್ಕಂದೂರು ಬಳಿ ಮಾ. ೩೦ರಂದು 'ಬ್ರೆರ್ ಸಾಮೋಜಿರ' ಎಂಬುವವರ ಮಗಳು. ಸುಮಾರು ೨೧ ವರ್ಷದ ಸರೋಜಾ ಎಂಬ ಯುವತಿಯು ಕೊಲೆಯಾಗಿದೆ.

ಮಾ. ೩೦ರಿಂದ ಆಕೆ ಕಾಣೆಯಾಗಿದ್ದಾಳೆಂದು ಏ. ೫ರಂದು ದೂರು ಬಂದಾಗ ಪೊಲೀಸರು ಹುಡುಕಾಟ ನಡೆಸಿ, ಕಾಡಿನಲ್ಲಿ ಹೂಳಲಾಗಿದ್ದು, ನಾಯಿಗಳು ತಿಂದು ಮೂಳೆ ಮಾತ್ರ ಉಳಿದಿದ್ದ ಶವದ ಅವಶೇಷ ಪತ್ತೆಯಾಯಿತು. ಕೊಲೆಗೆ ಕಾರಣ ಗೊತ್ತಾಗಿಲ್ಲ.

ಈ ಸಂಬಂಧ ಇನ್ನೂ (ಏ. ೧೦ರವರೆಗೆ) ಯಾರನ್ನೂ ಬಂಧಿಸಿಲ್ಲ. ತರೀಕೆರೆಯ ಡಿಎಸ್ಪಿ ಘೋರ್ಪಡೆ ಅವರು ಏ. ೮ರಿಂದ ಇಲ್ಲೇ ತಂಗಿದ್ದಾರೆ. ಏ. ೧೦ರಂದು ಜಿಲ್ಲಾ ಪೊಲೀಸ್ ಮುಖ್ಯಾಧಿಕಾರಿಗಳು ಭೇಟಿ ಕೊಟ್ಟಿದ್ದು, ಸಬ್ ಇನ್ಸ್‌ಪೆಕ್ಟರ್ ಲಕ್ಷ್ಮಣ್ ತನಿಖೆ ನಡೆಸುತ್ತಿದ್ದಾರೆ.

ನಮ್ಮ ಸ್ವಾಭಿಮಾನಕ್ಕೆ ಅಡ್ಡ ಬರಬೇಡಿ

—ಎಂ. ಡಿ. ಗಂಗಯ್ಯ

ಶೃಂಗೇರಿ: ಗೌಡರು, ಲಿಂಗಾಯತರು, ಬ್ರಾಹ್ಮಣರು ಎಲ್ಲರಿಗೂ ಗೌರವ ಕೊಡುತ್ತ ಬಂದಿದ್ದೇವೆ. ಆ ಗೌರವ, ಸ್ವಾಭಿಮಾನ ನಮಗೂ ಕೊಡಿ ಅಂತ ಪಟ್ಟು ಹಿಡಿದು ಕೇಳುವ ಕಾಲ ಬಂದಿದೆ. ನಮ್ಮ ಗೌರವ ಸ್ವಾಭಿಮಾನಕ್ಕೆ ಅಡ್ಡ ಬರಬೇಡಿ" ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಚಾಲಕ ಎಂ. ಡಿ. ಗಂಗಯ್ಯ ಇಲ್ಲಿ ಸಮಾಜದ 'ಪ್ರತಿಷ್ಠಿತರಿಗೆ' ಎಚ್ಚರಿಕೆ ಹೇಳಿದರು.

ಮಾ. ೩೮ರಂದು ದ. ಸಂ. ಸಮಿತಿಯ ಶೃಂಗೇರಿ ತಾ॥ ಶಾಖೆಯ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದ್ದರು.

"ಜೈಕಾರ ಹಾಕಿ, ನಮಸ್ಕಾರ ಮಾಡಿ ಮಾತ್ರ ಗೊತ್ತಿರುವ ಜನ ನಾವಲ್ಲ. ಅನ್ಯಾಯ ಮಾಡಿದವರಿಗೆ ಧಿಕ್ಕಾರ ಕೂಗಲಾರದ ಜನ ಅಲ್ಲ. ... [illegible] ... ರಿಗೆ ಜೈಕಾರ ಹಾಕ್ತಾರೆ. ... [illegible] ... ರನ್ನು ಕೊಡ್ತಾರೆ ಅಂತ ಜೈಕಾರ ಹಾಕ್ತಾರೆ" ಎಂದು ದಲಿತರ ಮನಸ್ಥಿತಿಯನ್ನು ಅವರು ವರ್ಣಿಸಿದರು. (೩ನೇ ಪುಟಕ್ಕೆ)

ಧಾರ್ಮಿಕ ಉತ್ಸವಕ್ಕೆ ಕಹಿ ಅಂತ್ಯ: ಶೃಂಗೇರಿಯಲ್ಲಿ ನಿಷೇಧಾಜ್ಞೆ

ಶೃಂಗೇರಿ: ಇಲ್ಲಿನ ದರ್ಗಾ ಇರುವ ಗೋರಿಗುಡ್ಡ ಅಥವಾ ಫಿರಂಗಿ ಗುಡ್ಡದ ಒಡೆತನದ ವಿಷಯದಲ್ಲಿ ಎರಡು ಕೋಮುಗಳ ನಡುವೆ ಶುರುವಾದ ಬಿಸಿ ವಾತಾವರಣ ಏ. ೫ರಂದು ಉರುಸ್ ನಡೆದ ನಂತರ ಸೆಕ್ಷನ್ ೧೪೪ರ ಜಾರಿಯಲ್ಲಿ ಕೊನೆಗೊಂಡಿತು.

ಚಪ್ಪರದಾಂಜನೇಯಸ್ವಾಮಿ ದೇವಸ್ಥಾನದಲ್ಲಿ ಇದೇ ಸಮಯದಲ್ಲಿ ರಾಮೋತ್ಸವವೂ ನಡೆಯುತ್ತಿದ್ದು, ಎರಡೂ ಕಡೆಯವರು ಮಧ್ಯರಾತ್ರಿ ಹೊತ್ತಿಗೆ ಮೆರವಣಿಗೆ ನಡೆಸಲು ಉದ್ದೇಶಿಸಿದಾಗ ಪರಿಸ್ಥಿತಿ ಪ್ರಕ್ಷುಬ್ಧಗೊಳ್ಳುವ ಸೂಚನೆ ಕಂಡ ಜಿಲ್ಲಾ ಪೊಲೀಸ್ ಮುಖ್ಯಾಧಿಕಾರಿಗಳು ತಾ॥ ಮ್ಯಾಜಿಸ್ಟ್ರೇಟ್‌ರೊಂದಿಗೆ ಚರ್ಚಿಸಿ, ಒಂದು ವಾರ ಕಾಲ ನಿಷೇಧಾಜ್ಞೆ ವಿಧಿಸುವ ತೀರ್ಮಾನ ಕೈಗೊಂಡರು. ನಂತರ ಶಾಂತ ರೀತಿಯಲ್ಲಿ ಚದುರುವಂತೆ ಜನರಿಗೆ ವಿನಂತಿಸಿದರು. ಈಗ ಪರಿಸ್ಥಿತಿ ಹತೋಟಿಯಲ್ಲಿದೆಯೆಂದು ತಿಳಿದು ಬಂದಿದೆ.

'ಹುಟ್ಟು ಆಕಸ್ಮಿಕ, ಬದುಕು ಮುಖ್ಯ'

ರಾಮೋತ್ಸವದ ಸಮಾರಂಭದಲ್ಲಿ ಭಾಗವಹಿಸಿದ ನಂತರ ಉರುಸನ್ನು ಉದ್ಘಾಟಿಸಿ ಮಾತನಾಡಿದ ಬೇಗಾನೆ ರಾಮಯ್ಯ, 'ಹುಟ್ಟು ಆಕಸ್ಮಿಕ. ಅದರ ಆ ಮೇಲಿನ ಬದುಕು ಚೆನ್ನಾಗಿರುವುದು ಮುಖ್ಯ. ಕಾಲ ಹಲವಾರು ಸಮಸ್ಯೆಗಳಿಗೆ ಔಷಧಿ. ಕೆಸರಿದ್ದ ಕೆರೆಯನ್ನ ಸ್ವಲ್ಪ ಕಾಲ ಬಿಟ್ಟರೆ ಶುದ್ಧ ನೀರು ಸಿಗುತ್ತದೆ. ಹಾಗೇ ಈ ಸಮಸ್ಯೆಯೂ ಕೂಡ' ಎಂದು ಹೇಳಿ. ಸಾಮರಸ್ಯದಿಂದ ಇರುವಂತೆ ಎಲ್ಲ ಕೋಮುಗಳವರಿಗೆ ಕರೆಕೊಟ್ಟರು.

ಒನ್ ಬೈ ಟೂ ಗಾದಿ!

ಕಾಫಿ, ಟೀ, ದೋಸೆ ವಗೈರೆ ಒನ್ ಬೈ ಟೂ ಕೇಳಿದ್ದೀರಿ. ಅಧಿಕಾರ ಸ್ಥಾನವೊಂದರ ಒನ್ ಬೈ ಟೂ ಕೇಳಿದ್ದೀರಾ?

ಕಳೆದ ಬಾರಿ ನ. ರಾ. ಪುರ ಪುರಸಭೆಯ ಉಪಾಧ್ಯಕ್ಷ ಸ್ಥಾನಕ್ಕೆ ಟಿ. ಎಸ್. ನಾಗರಾಜಶೆಟ್ಟಿ ಮತ್ತು ರಜಾಕ್ ಸಾಹೇಬ್ ಎಂಬಿಬ್ಬರು ಸ್ಪರ್ಧಿಸಿದ್ದರು. ಗಾದಿಯನ್ನು ಅರ್ಧರ್ಧ ಅವಧಿಗೆ ಹಂಚಿಕೊಳ್ಳುವ ಒಪ್ಪಂದವೇರ್ಪಟ್ಟು, ನಾಗರಾಜಶೆಟ್ಟಿ ಉಪಾಧ್ಯಕ್ಷರಾದರು. ಅದರಂತೆ ಈಚೆಗೆ ಅವರ ಪಾಲಿನ ಅವಧಿ ಮುಗಿದು ಅಧಿಕಾರ ಬಿಟ್ಟು ಕೊಡಲು ಕೇಳಿದಾಗ ಅವರು ಒಪ್ಪಲಿಲ್ಲವಂತೆ. ಮಾತಿನ ಚಕಮಕಿ ಆಯಿತಂತೆ. ಕಡೆಗೆ, ಮೇ ೫ರವರೆಗೆ ಕಾಲಾವಕಾಶ ಕೇಳಿದ್ದಾರಂತೆ. ಹೇಗಿದೆ ಒನ್ ಬೈ ಟೂ ರುಚಿ?

ಹೆಂಡತಿಯನ್ನೇ ಒನ್ ಬೈ ಟೂ ಶೇರ್ ಮಾಡಿಕೊಂಡ ಉದಾಹರಣೆ ಇದೆ. ಇದೇನು ಮಹಾ ಎನ್ನುತ್ತೀರಾ?

ಅರ್ಮುಗಂ, ಪ್ರಸಾದ್‌ರಿಗೆ ನಿದ್ದೆ ಬಾರದಿರಲಿ

ದೇಶಾದ್ಯಂತ ದಲಿತರ ಮೇಲೆ ದಬ್ಬಾಳಿಕೆ, ಅಸಂಖ್ಯ ಕೊಲೆಗಳು ನಡೆಯುತ್ತಿವೆ. ದಲಿತರ ಹೆಸರಲ್ಲಿ (ಮೀಸಲು ಸ್ಥಾನಗಳಿಂದ) ಶಾಸಕ ಮಂತ್ರಿಗಳಾಗಿರುವವರು ಏನೂ ಪ್ರತಿಭಟನೆ ಮಾಡಲಾರದೆ, ಕೇವಲ ಅಧಿಕಾರಕ್ಕೆ ಅಂಟಿಕೊಂಡು ನಾಯಿಬಾಳು ಬಾಳುತ್ತಿದ್ದಾರೆ. ಅವರನ್ನು 'ನಿದ್ರೆಯಿಂದ' ಎಚ್ಚರಿಸಲು ಕರ್ನಾಟಕ ದಲಿತ ಸಂಘರ್ಷ ಸಮಿತಿ ಫೆ. ೨೭ ರಂದು ಎಲ್ಲ ಕಡೆ ದಲಿತ ಶಾಸಕ, ಮಂತ್ರಿಗಳ ಮನೆ ಮುಂದೆ ಧರಣಿ ನಡೆಸಿದ ಸಂದರ್ಭದಲ್ಲಿ ಮೈಸೂರು, ಕೋಲಾರಗಳಲ್ಲಿ ಶ್ರೀನಿವಾಸ ಪ್ರಸಾದ್ (ಎಂ. ಪಿ), ಸಿ. ಎಂ. ಅರ್ಮುಗಂ (ಶಾಸಕ) ಅವರು ಗೂಂಡಾಗಳಿಂದ ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಿದರು.

ಈ ಹಿನ್ನೆಲೆಯಲ್ಲಿ, ಅಗ್ರಗಣ್ಯ ದಲಿತ ಸಾಹಿತಿ ದೇವನೂರು ಮಹಾದೇವರ ಭಾವನೆಗಳಿವು.

ಫೆಬ್ರವರಿ ೨೭ ರ ರಾತ್ರಿ ಇಡೀ ನನಗೆ ನಿದ್ದೆ ಬರಲಿಲ್ಲ. ನನ್ನ ದೇಹದ ತುಂಬ ಸಂಕಟ ತುಂಬಿ ಯಾತನೆ ಪಡುತ್ತಿತ್ತು. ದಲಿತನ, ಗರೀಬನ ಬೆಳಕಾದ ದಲಿತ ಸಂಘರ್ಷ ಸಮಿತಿಯು ಕರ್ನಾಟಕದ ದಲಿತ ಮಂತ್ರಿ ಶಾಸಕರ ಮನೆ ಮುಂದೆ ಫೆಬ್ರವರಿ ೨೭ ರಂದು ಧರಣಿ ನಡೆಸಿದಾಗ ಕೆ. ಜಿ. ಎಫ್‌ನಲ್ಲಿ ಅರ್ಮುಗಂ ಬೆಂಬಲಿಗರು, ಮೈಸೂರಲ್ಲಿ ಶ್ರೀನಿವಾಸಪ್ರಸಾದ್, ಸತ್ಯಾಗ್ರಹಿಗಳ ಮೇಲೆ ಕೈ ಮಾಡಿ, ಏಳೇಳು ಸಮುದ್ರದ ನೀರು ತಂದು ತೊಳೆದರೂ ಅಳಿಸಲಾಗದ ಪಾಪವನ್ನು ತಮ್ಮಗಳ ಕೈಗೆ ಅಂಟಿಸಿಕೊಂಡರು. ಈ ಪಾಪದ ಕೈ ಸಾಥ ರಾಜಕೀಯದಲ್ಲಿ ಈ ಸರ್ಕಾರಿ ಲೆಕ್ಕದಲ್ಲೆ ೧೯೭೩ ರಿಂದ ಇಲ್ಲಿನವರೆಗೆ ಸುಮಾರು ನಲವತ್ತು ಸಾವಿರ ದಲಿತರ ಮೇಲೆ ಹಲ್ಲೆ ಕೊಲೆಗಳಾಗಿದ್ದರೂ ಕಂಡೂ ಕಣ್ಮುಚ್ಚಿರುವ ದಲಿತ ಮಂತ್ರಿ ಶಾಸಕರ ಸತ್ತತನವನ್ನು ಎಚ್ಚರಿಸುವುದು ಧರಣಿಯ ಉದ್ದೇಶವಾಗಿತ್ತು. ಈ ಮಂತ್ರಿ ಶಾಸಕರಾಗಿ ದಲಿತರೆನ್ನಿಸಿಕೊಂಡವರು ಒಂದೇ ಒಂದು ಸಲವಾದರೂ ಒಟ್ಟಾಗಿ 'ದಲಿತರ ಕೊಲೆ ಹಲ್ಲೆ ಇನ್ನು ಸಹಿಸೆವು' ಎಂದಿದ್ದರೆ,– ಕೇವಲ ಅಂದಿದ್ದರೆ-ಬೆಂಕಿಗೆ ಎಸೆಯಲ್ಪಟ್ಟ ಎಷ್ಟೋ ಕಂದಮ್ಮಗಳು ಇಂದೂ ಉಳಿದು ಉಸಿರಾಡುತ್ತಿದ್ದವು. ದಲಿತರಾಗಿ ಈ ಧರೆ ಮೇಲೆ ಹುಟ್ಟಿದ್ದಕ್ಕೆ ದೇಹ ಅನ್ನುವುದನ್ನು ತುಕುಡ ತುಕುಡವಾಗಿ ಕತ್ತರಿಸಲ್ಪಟ್ಟಿದ್ದರಿಂದ ಉಸಿರು ಕಳೆದುಕೊಂಡ ಎಷ್ಟೋ ಜೀವಗಳು ಇಂದೂ ಜೀವಂತವಾಗಿರುತ್ತಿದ್ದುವು. ಇಂದು ಗಾಳಿಯಲ್ಲಿ ತೇಲಾಡುತ್ತಿರುವ, ಅತ್ಯಾಚಾರಕ್ಕೆ ಒಳಗಾದ ನಮ್ಮ ಅಕ್ಕ ತಂಗಿಯರ ನಿಟ್ಟುಸಿರು ಆಕ್ರಂದನಗಳು ಇರುತ್ತಿರಲಿಲ್ಲ. ದಲಿತ ಮಂತ್ರಿ ಶಾಸಕರಾಗಿಯೂ ಇವೆಲ್ಲವುಗಳಿಂದಲೂ ದೂರವಿರುವುದರ ಕಠೋರ ಜಡಸ್ಥಿತಿಯನ್ನು ಮುಂದಿಟ್ಟು ಅವರ ಹೊಣೆಯನ್ನು ಹೆಚ್ಚಿಸಲು ಹೊರಟರೆ ಅರುಮುಗಂ, ಪ್ರಸಾದ್‌ರು ಅರಿವಿಲ್ಲದವರಾದರು. ದಲಿತರನ್ನು ಇತರರು ಕೊಲ್ಲುವುದೂ ಇವರು ದಲಿತರಾಗಿಯೇ ದಲಿತರ ಮೇಲೆ ಕೈ ಮಾಡುವುದೂ ಎರಡೂ ಸಮನೇ. ಮೈಸೂರಲ್ಲಿ ಪ್ರಸಾದ್ ಮನೆ ಮುಂದೆ ನಡೆಯುತ್ತಿದ್ದ ಧರಣಿ ಮಧ್ಯಾಹ್ನ ನೀಟುಬಿಕೊಎಂದಾಗ ಸ್ವಲ್ಪ ದುಡುಕು ಸ್ವಭಾವದ ಪ್ರಸಾದ್‌ರ ತಮ್ಮ ಗಲಾಟೆ ಮಾಡಿ, ಈ ರೀತಿಯಾಗಿರಬೇಕೆಂದು ಕೊಂಡೆ. ಆಮೇಲೆನಿಂತ ಧರಣಿಯನ್ನು ಮುಂದುವರಿಸಿ ರಾತ್ರಿಯಾದ ಮೇಲೆ ಪ್ರಸಾದೇ ಕೈ ಮಾಡಿದ್ದೆಂದು ತಿಳಿದು ತಲ್ಲಣಿಸಿಹೋದೆ. ಆ ರಾತ್ರಿ ಇಡೀ ಕೋಪವಿಲ್ಲದೆ ಸೇಡಿಲ್ಲದೆ ದ್ವೇಷವಿಲ್ಲದೆ ನಮ್ಮ ಸ್ಥಿತಿಗೆ ಸಂಕಟ[illegible] ನಾನಾಗಿ ಉರಿದಂತೆ ಉಂದೆ

ಹಿಂದೊಂದು ಕಾಲದಲ್ಲಿ ಅರ್ಮುಗಂ ಯುವಕರಾಗಿದ್ದಾಗ ದಲಿತ ಜನಾಂಗದ ಯಾತನಾ ಬಾಳಿನ ಪ್ರತಿನಿಧಿ ಎನ್ನಿಸಿದ್ದರು. ದಲಿತರ ಮೇಲಿನ ಅನ್ಯಾಯ ಅತ್ಯಾಚಾರ ಪ್ರತಿಭಟಿಸುತ್ತಿದ್ದುದಕ್ಕಾಗಿ ಆ ಮಾಜಿ ತರುಣ ಅರ್ಮುಗಂ ಮೈಮೇಲೆ ಮುಖದಮೇಲೆ ಹೊಡೆತ ಬಡಿತಗಳು ಬಿದ್ದು ಗಾಯಗಳಿಂದಾದ ಗುರುತುಗಳಿನ್ನೂ ಇವೆ. ಈಗ ಹಾಲಿ ಅರ್ಮುಗಂರು ದೇಹದ ಗಾಯದ ಗುರುತುಗಳನ್ನು ಸೂಟಿನಿಂದಲೂ ಮುಖದ ಗಾಯದ ಗುರುತುಗಳನ್ನು ಗಡ್ಡದ ಕೂದಲಿನಿಂದಲೂ ಮುಚ್ಚಿಕೊಂಡು–ಹೀಗೆ ಮುಚ್ಚಿಕೊಂಡಂತೆಲ್ಲ ಇವರು ತನ್ನನ್ನೂ ತಾವು ಬಂದ ಸ್ಥಳವನ್ನೂ ಮರೆತು ಕಣ್ಮುಚ್ಚಿದರು. ಇದರಿಂದಾಗಿ 'ಕೊಲೆ ತಪ್ಪಿಸಿ' ಎಂಬ ಕೂಗಿಗೇ ಕೈ ಮಾಡುವಂತಾದರು. ಇತ್ತ ಶ್ರೀನಿವಾಸಪ್ರಸಾದ್ ಇನ್ನೂ ಅರ್ಮುಗಂ ಆಗಿಲ್ಲದಿದ್ದರೂ ದಲಿತರ ದನಿ ಮೇಲೆಯೇ ಕೈ ಎತ್ತಿ ಅರ್ಮುಗಂ ದಿಕ್ಕಲ್ಲೇ ಹೆಜ್ಜೆ ಇಟ್ಟರು.

ಈಗ ಅರ್ಮುಗಂ ತಮ್ಮ ಈ ಸ್ಥಿತಿಯನ್ನು ಸುಟ್ಟುಕೊಂಡು ಹದಿನೆಂಟು ವಯಸ್ಸಿನ, ಕೂದಲಿರದ, ಮುಖದ ಮೇಲೆ ಗಾಯದ ಗುರುತುಗಳುಳ್ಳ ತರುಣ ಅರ್ಮುಗಂ ಆಗಬಲ್ಲರೇ? ಹಾಲಿ ಅರ್ಮುಗಂ ಆಗುವ ದಿಕ್ಕಲ್ಲಿ ಹೊರಟಿರುವ ಪ್ರಸಾದ್ ಅದರಿಂದ ತಪ್ಪಿಸಿಕೊಂಡು ಉಳಿಯಬಲ್ಲರೆ? ಉಳಿಯಲಿ ಎಂದು ನನ್ನ ಆಸೆ. ಅದಕ್ಕಾಗಿ. ಬೀಸುತ್ತಿರುವ ಗಾಳಿಯಲ್ಲಿ ನಿಟ್ಟುಸಿರಿಡುತ್ತಿರುವ, ಬೆಂಕಿಗೆಸೆಯಲ್ಪಟ್ಟ ಕಂದಮ್ಮಗಳ ಸುಟ್ಟ ಮಾಂಸದ ವಾಸನೆಯು ಚೀರಾಟ; ದಲಿತರಾಗಿ ಹುಟ್ಟಿದ್ದಕ್ಕಾಗಿ ಕತ್ತರಿಸಲ್ಪಟ್ಟ ದೇಹಗಳ ವಾಸನ ರೋದನ ಅರ್ಮುಗಂ ಪ್ರಸಾದ್‌ರಂಥವರ ಕಿವಿಗೆ ಕೇಳಿಸಲಿ; ಕಣ್ಮುಂದೆ ಕಟ್ಟಿದಂತಿರಲಿ, ಎದೆಯಲ್ಲಿ ಸಂಕಟ ತುಂಬಿ ಆಗವಾಗ ದಲಿತ ಪ್ರತಿನಿಧಿಗಳಿಗೂ ನಿದ್ದೆ ಬಾರದಿರಲಿ.......

(ಸೌಜನ್ಯ: ಪಂಚಮ)

ಪವಾಡದವರಿಗೆ ವಿಚಾರವಾದದ ಸವಾಲು

ಈ ಶತಮಾನದ ವಿಶ್ವವಿಖ್ಯಾತ ವಿಚಾರವಾದಿ ಮತ್ತು ಮನೋವಿಜ್ಞಾನಿ ದಿವಂಗತ ಡಾ|| ಅಬ್ರಹಾಂ ಟಿ. ಕೋವೂರ್‌ರವರ ನೆನಪಿನಲ್ಲಿ ಚಿಕ್ಕಮಗಳೂರಿನ ವಿಚಾರವಾದಿ ವೇದಿಕೆಯು ಪವಾಡ ಮತ್ತು ದೈವಿಕ ಶಕ್ತಿ ಹೊಂದಿರುವುದಾಗಿ ಹೇಳಿಕೊಳ್ಳುವವರಿಗೆ ಹತ್ತು ಸಾವಿರ ರೂ. ಗಳ ಸವಾಲು ಹಾಕಿದೆ. ಇವು ಅತ್ಯಂತ ಜವಾಬ್ದಾರಿಯುತವಾದ ಸವಾಲುಗಳಾಗಿದ್ದು, ವಿವರ ಕೆಳಗಿನಂತಿದೆ:

ಸವಾಲುಗಳು

೧) ತಮ್ಮ ಮೂರುಮುಖ್ಯ "ಪವಾಡ"ಗಳಾದ (ಅ) ಶೂನ್ಯದಿಂದ ಕೈ ಗಡಿಯಾರ ಸೃಷ್ಟಿಸುವುದು, (ಆ) ನೀರನ್ನು ಪೆಟ್ರೋಲ್ ಆಗಿ ಪರಿವರ್ತಿಸುವುದು, (ಇ) ಒಂದೇ ಕಾಲದಲ್ಲಿ ಎರಡು ಕಡೆ ಕಾಣಿಸಿಕೊಳ್ಳುವುದು-ಇವನ್ನು ವೈಜ್ಞಾನಿಕ ಪರೀಕ್ಷೆಗೆ ಒಪ್ಪಿಸುವಂತೆ ಸಾಯಿಬಾಬಾ ಅವರ ಮನ ಒಲಿಸುವುದು.

೨) ಸೀಲಾದ ಕವರ್‌ನಲ್ಲಿರುವ ಕರೆನ್ಸಿ ನೋಟಿನ ನಂಬರನ್ನು ಹೇಳುವುದು

೩) ಕರೆನ್ಸಿ ನೋಟೊಂದರ ತದ್ರೂಪ್ ಪ್ರತಿಯನ್ನು ಸೃಷ್ಟಿಸಿಕೊಡುವುದು

೪) ಉರಿಯುವ ಕೆಂಡದ ಮೇಲೆ ಕಾಲಿಗೆ ಏನನ್ನೂ ಧರಿಸದೆ ಮತ್ತು ಏನನ್ನೂ ಹಚ್ಚಿಕೊಳ್ಳದೆ, ಕಾಲಿಗೆ ಬೊಬ್ಬೆ ಬರಿಸಿಕೊಳ್ಳದೆ, ೨ ನಿಮಿಷಗಳ ಕಾಲ ಕದಲದೆ ನಿಲ್ಲುವುದು

೫) ನಾವು ಕೇಳುವ ವಸ್ತುವನ್ನು ಶೂನ್ಯದಿಂದ ಸೃಷ್ಟಿಸಿಕೊಡುವುದು

೬) ಗಾಳಿಯಲ್ಲಿ ಯೋಗಿಕ ಶಕ್ತಿಯಿಂದ ತೇಲಾಡುವುದು

೭) ನೀರಿನ ಮೇಲೆ ಯೋಗಿಕ ಶಕ್ತಿಯಿಂದ ನಡೆದಾಡುವುದು

೮) ನೀರನ್ನು ಪೆಟ್ರೋಲನ್ನಾಗಿ ಪರಿವರ್ತಿಸುವುದು

ಈ ಸಂಬಂಧ ನಿಬಂಧನೆಗಳನ್ನು ಟಿ. ಸುಬ್ರಮಣ್ಯಂ, ಕನ್ನಡ ಅಧ್ಯಾಪಕ, ಐ. ಡಿ. ಎಸ್. ಜಿ. ಕಾಲೇಜು, ಚಿಕ್ಕಮಗಳೂರು ಇವರಿಂದ ಪಡೆಯಬಹುದು.

'ಸಂಜಯಗಾಂಧೀನ ನೋಡ್ಬೇಕಾಗುತ್ತೆ'

೧೯೮೦ ರ ಜನವರಿಯಲ್ಲಿ ಇಂದಿರಾ ಗಾಂಧಿಯವರು ಚಿಕ್ಕಮಗಳೂರಿಗೆ ಬಂದಿದ್ದಾಗ ಚಿಕ್ಕಮಗಳೂರಿಗೆ ಹೋಗಿ ಬರಲು ರಾಜ್ಯ ಸಾರಿಗೆ ಬಸ್ಸಿನ ವ್ಯವಸ್ಥೆ ಇತ್ತು. ಹಾಗೆ ಹೋಗಿ ಬಂದವರಲ್ಲಿ ನಾನೂ ಒಬ್ಬ

ವಾಪಸು ಬರುವಾಗ, ಬಸ್ಸಿನ ವೇಗ ಬಹಳ ಕಮ್ಮಿಯಿದ್ದು, ಕೆಲವರಿಗೆ (ಯುವಕರಿಗೆ) 'ಬೋರ್' ಎನ್ನಿಸಿತು. 'ಏನು, ನಮ್ಮ ಡ್ರೈವರ್ ಎತ್ತಿನಗಾಡಿಯ ತರಹಾ ಓಡಿಸ್ತಾ ಇದ್ದಾರಲ್ಲಾ' ಮುಂತಾಗಿ ತಮಾಶೆ ಮಾಡತೊಡಗಿದರು. ಇದರಿಂದ ಬಸ್ಸಿನ ವೇಗ ಸ್ವಲ್ಪ ಹೆಚ್ಚಿತಾದರೂ ಸಾಕಾಗದೇ ಇನ್ನೂ ಜೋರೆ ಜೋರೆ ಧರದಲ್ಲಿ ತಮಾಶೆ ಮುಂದುವರಿಯಿತು.

ಆಗ ಈ ತಮಾಶೆಯನ್ನು ಸಹಿಸದೆ ಕೋಪಗೊಂಡ ಡ್ರೈವರ್–"ಈಗ ನೀವು ಇಂದಿರಾಗಾಂಧಿಯನ್ನು ನೋಡಿ ಬಂದಿದ್ದೀರಿ ನಾನು ಇನ್ನೂ ವೇಗವಾಗಿ ಬಸ್ಸು ಓಡಿಸಿದರೆ ಸಂಜಯಗಾಂಧಿಯನ್ನು ನೋಡಬೇಕಾಗುತ್ತದೆ" ಎಂದ. ಬಸ್ಸಿನಲ್ಲಿದ್ದವರೆಲ್ಲ ಗಪ್ ಚುಪ್.

ಎಂ. ಯು. ಇಲಿಯಾಸ್, ಕೊಪ್ಪ

ಅಂತರ್ಜಾತಿ ವಿವಾಹಿತರ ಬೆಂಬಲಕ್ಕೆ ಹೊಸ ಸಂಘ

ಅಂತರ್ಜಾತಿ ಮದುವೆ ಆಗುವವರಿಗೆ ಸಮಾಜದಲ್ಲಿ ಮಾನ್ಯತೆ ಹಾಗೂ ರಕ್ಷಣೆ ದೊರಕಿಸಲು ಕಲ್ಯಾಣ ಸಂಘವೊಂದನ್ನು ಶಿವಮೊಗ್ಗದಲ್ಲಿ ಸ್ಥಾಪಿಸಲಾಗಿದೆ. ಶಿವಮೊಗ್ಗ ನಗರ ಸಭೆ ಸದಸ್ಯ ಆದಿಶೇಷನ್ ಅಧ್ಯಕ್ಷರಾಗಿರುವ ಈ ಸಂಘ ವರದಕ್ಷಿಣೆ ಪಿಡುಗು ನಿವಾರಣೆಗೂ ಶ್ರಮಿಸುವುದು.

ಸವಾಲಿನ ಸತ್ವ ಪರೀಕ್ಷೆ ನಡೆದೇ ಹೋಯಿತು....

ಅಮೇರಿಕದಲ್ಲಿರುವ ಭಾರತದ ಮಹೇಶ ಯೋಗಿಯ ಕೆಲವು ಅಮೇರಿಕನ್ ಶಿಷ್ಯರ ತಂಡವೊಂದು ಈಚೆಗೆ ಚಿಕ್ಕಮಗಳೂರಲ್ಲಿ ಅತೀಂದ್ರಿಯ ಧ್ಯಾನದ ಮಹಿಮೆಯೆಂದು ಹೇಳಿ, ಜನರು ಗಾಳಿಯಲ್ಲಿ ತೇಲಾಡುವಂತೆ ಕ್ಯಾಮರಾ ತಂತ್ರದಿಂದ ತೆಗೆದ ಚಿತ್ರಗಳನ್ನು ತೋರಿಸಿ, ಜನರನ್ನು ವಂಚಿಸುತ್ತಿದ್ದರೆಂದೂ, ವಿಚಾರವಾದಿ ವೇದಿಕೆಯು ಸಭೆಗೆ ಅವರನ್ನು ಕರೆಸಿ ಪ್ರಶ್ನಿಸಿದಾಗ ಅವರ ವಂಚನೆಯನ್ನು ಮುಚ್ಚಿಟ್ಟುಕೊಳ್ಳಲಾರದೆ ಹೋದರೆಂದೂ ವರದಿಯಾಗಿದೆ.

ಸಭೆಯಲ್ಲಿ ವೇದಿಕೆಯ ಸದಸ್ಯರೊಬ್ಬರ ಪ್ರಶ್ನೆಗೆ ಉತ್ತರಿಸುತ್ತ ತಂಡದವನೊಬ್ಬ ತಾನು ಅತೀಂದ್ರಿಯ ಧ್ಯಾನ ಶಕ್ತಿಯಿಂದ ೧ನವೂ ಗಾಳಿಯಲ್ಲಿ ತೇಲಾಡುವುದಾಗಿ ಕೊಚ್ಚಿಕೊಂಡನೆಂದೂ, ಅದನ್ನು ಜನರ ಎದುರೇ ಮಾಡಿ ತೋರಿಸಿ ಹತ್ತು ಸಾವಿರ ರೂ. ಪಡೆಯಬೇಕೆಂದುಸದಸ್ಯರು ಸವಾಲು ಹಾಕಿದಾಗ ಆ 'ಅತೀಂದ್ರಿಯ' ವ್ಯಕ್ತಿಗಳು ಗಲಿಬಿಲಿಗೊಂಡು, ಕೂಗಾಡಿ ಅಲ್ಲಿಂದ ಹೊರಟು ಹೋದರೆಂದೂ ವರದಿಯಾಗಿದೆ.

ಈ ಘಟನೆಯ ಬಗ್ಗೆ ಪತ್ರಿಕಾ ಹೇಳಿಕೆ ನೀಡಿರುವ ವಿಚಾರವಾದಿವೇದಿಕೆ, "ಮಹೇಶ ಯೋಗಿ ಅತೀಂದ್ರಿಯ ಧ್ಯಾನದ ಸಿದ್ಧಿಗಳೆಂಬ ಸುಳ್ಳಿನ ಕಂತೆಯಿಂದ ವಿದೇಶಿ ಮೊದ್ದು ಮಣಿಗಳನ್ನು ಮರುಳು ಮಾಡಿ ಚೆನ್ನಾಗಿ ಹಣಮಾಡ್ದು, ಈಗ ಭಾರತದ ಕಡೆ ದೃಷ್ಟಿ ಹರಿಸಿದ್ದಾನೆ. ಮುಗ್ಧ ಭಾರತೀಯರನ್ನು ವಂಚಿಸಲು ಈ ಮೂರನೇ ದರ್ಜೆ ಬುದ್ಧಿಯ ವಿದೇಶಿಯರನ್ನು ತನ್ನ ಏಜೆಂಟರನ್ನಾಗಿ ಈ ಭಾಗಕ್ಕೆ ಕಳಿಸಿದ್ದಾನೆ. ಈ ಏಜೆಂಟರು ಈ ಕಡೆಯ ಶ್ರೀಮಂತ ಮರುಳರಿಗೆ ಟೋಪಿ ಹಾಕಲು ಪ್ರಯತ್ನಿಸುತ್ತಿದ್ದಾರೆ.

"ಈ ಏಜಂಟರುಗಳಿಗೆ ಕಿಂಚಿತ್ತಾದರೂ ಆತ್ಮಗೌರವ, ಮಾನ ಮರ್ಯಾದೆಗಳಿದ್ದರೆ, ವಿಚಾರವಾದಿ ವೇದಿಕೆಯ ಸವಾಲನ್ನು ೨೫೦ ರೂ ಠೇವಣಿ ಕಟ್ಟುವುದರ ಮೂಲಕ ಅಂಗೀಕರಿಸಬೇಕು. ಮಂಚಿತ ಉಚಿತ ವಾತಾವರಣದಲ್ಲಿ, ಅತೀಂದ್ರಿಯ ಸಿದ್ಧಿಯ ಮೂಲಕ ಗಾಳಿಯಲ್ಲಿ ತೇಲಾಡಿ ಠೇವಣಿ ಹಣದ ಜೊತೆ ಬಹುಮಾನದ ಹಣ ಹತ್ತು ಸಾವಿರ ರೂಗಳನ್ನು ಪಡೆಯಬೇಕು. ಇಲ್ಲದಿದ್ದರೆ ಶರಣಾಗತರಾಗಿ ತಮ್ಮ ಮೋಸವನ್ನು ಒಪ್ಪಿಕೊಂಡು ದೇಶ ಬಿಟ್ಟು ತೊಲಗಬೇಕು." ಎಂದು ಸವಾಲು ಹಾಕಿದ್ದಾರೆ.

ಈ ವಿದೇಶಿ ವಂಚಕರು ಉಳಿದ ಕಡೆ ಕೂಡ ಮೋಸಮಾಡಲು ಬರಬಹುದೆಂದೂ ಇವರನ್ನು ದೇಶದಿಂದ ಗಡೀಪಾರುಮಾಡಬೇಕೆಂದ ಜನರಲ್ಲಿ ವಿಚಾರವಾದಿ ವೇದಿಕೆಯವರು ಕೇಳಿಕೊಂಡಿದ್ದಾರೆ.

ಓದುಗರ ಪತ್ರಗಳು

ಕಮ್ಮರಡಿಯವರಿಗೊಂದು ಕಿವಿಮಾತು

ಸಂಪಾದಕರಿಗೆ,
'ದೀವಟಿಗೆ' ವಾರಪತ್ರಿಕೆ,
ಕೊಪ್ಪ.

ಇತ್ತೀಚೆಗೆ 'ಹೊಸದಿಗಂತ' ದಿನಪತ್ರಿಕೆಯಲ್ಲಿ ಕಮ್ಮರಡಿಗೆ ನೀರು ಸರಬರಾಜು ಮಾಡುವ ಬಗ್ಗೆ ಒಂದು ಟೆಂಡರ್ ಕರೆಯಲಾಗಿದೆ. ಈ ಬಗ್ಗೆ ಕಮ್ಮರಡಿಯ ನೀರು ಬಳಸುವ ಜನರೆಲ್ಲ ಸ್ವಲ್ಪ ಗಮನ ಹರಿಸಬೇಕು.

ಟೆಂಡರ್ ಪ್ರಕಾರ ಇದು ಸಾಕಷ್ಟು ದೊಡ್ಡ ಯೋಜನೆ. ಅಂದರೆ ಇದನ್ನು ಕಂಟ್ರಾಕ್ಟ್ ಮಾಡಲು ಕಾಣದ ಯಾವುದೋ ಊರಿನವರು ಬರುತ್ತಾರೆ. ಸಾಮಾನ್ಯವಾಗಿ ಎಲ್ಲ ಕಡೆಗಳಲ್ಲೂ ಆಗುವಂತೆ ಅಧಿಕಾರಿಗಳು ಮತ್ತು ಕಂಟ್ರಾಕ್ಟರುಗಳು ಸೇರಿ ಹಣ ನುಂಗಿ, ಕಣ್ಣುಕಟ್ಟಿನ ಕೆಲಸ ಮಾಡಿಟ್ಟು ನಡೆದುಬಿಡುತ್ತಾರೆ. ಕೊಪ್ಪದವನಾಗಿ ನನಗೆ ಈ ವಿಷಯ ಚೆನ್ನಾಗಿ ಅನುಭವವಾಗಿದೆ. ಇಲ್ಲಿನ ನೀರುಸರಬರಾಜು ಯೋಜನೆಗಾಗಿ ಹಣ ನೀರಿನಂತೆ ಖರ್ಚಾಗಿದ್ದರೂ ಕೊಪ್ಪದ ಜನ ಇವತ್ತಿಗೂ ನೀರಿಗಾಗಿ ಪರದಾಡುತ್ತಿದ್ದೇವೆ.

ಆದ್ದರಿಂದ ನನಗನ್ನಿಸುವಂತೆ. ಕಮ್ಮರಡಿಯವರು ಕೂಡಲೇ ಮಾಡಬೇಕಾದ್ದಿಷ್ಟು: ಈ ಯೋಜನೆ ಯಾವಾಗ ಶುರುವಾಗುತ್ತದೆ ಎಂಬುದನ್ನು ಗಮನವಿಟ್ಟು ನೋಡಿಕೊಳ್ಳುವುದು. ಪ್ರಾರಂಭದಿಂದಲೂ ಊರಿನವರು, ಒಂದು ಸಂಘವೋ, ಸಮಿತಿಯೋ, ಏನನ್ನಾದರೊಂದು ಮಾಡಿಕೊಂಡು ಈ ಸಂಬಂಧವಾಗಿ ನಡೆಯುವ ಎಲ್ಲ ಕೆಲಸಗಳ ಮೇಲೂ ನಿಗಾ ಇಡುವುದು. ಕೆಲಸ ತೃಪ್ತಿಕರವಾಗಿ ನಡೆಯದಿದ್ದರೆ ಸಂಬಂಧಪಟ್ಟ ಅಧಿಕಾರಿಗಳಲ್ಲಿ ಸಕಾರಣವಾಗಿ ತಕರಾರು ತೆಗೆಯುವುದು; ಈ ಬಗ್ಗೆ ಯಾರ ಮುಲಾಜಿಗೂ ಒಳಗಾಗದೇ ಇರುವುದು.

ಹೀಗೆ ಊರವರೆಲ್ಲಾ ಸೇರಿ ನೀರಿನ ಈ ಯೋಜನೆ ಬಗ್ಗೆ ಗಮನ ಇಟ್ಟರೆ ಮಾತ್ರ ನಿಮ್ಮೂರಿಗೆ ಸಿಗಬೇಕಾದ ನೀರು ಸರಿಯಾಗಿ ಸಿಕ್ಕೀತು. ಇಲ್ಲವಾದರೆ, ಕಡೆಗೆ ಸಿಗುವುದು ನೀರು ಯಾಕೆ ಬರುತ್ತಿಲ್ಲ ಎಂಬುದಕ್ಕೆ ಕಾರಣಗಳು ಮಾತ್ರ.

ಕೊಪ್ಪ. —ಕೆ. ಸುಂದರ ರಾವ್

ಅಭಿನಂದನೆ

ಮಾನ್ಯರೆ,

ಫೆ. ೪ರ 'ದೀವಟಿಗೆ' ಯಲ್ಲಿ ಕೊಪ್ಪದ ಆಸ್ಪತ್ರೆಯಲ್ಲಿ 'ಎರಡು ತಲೆ' ಶಿಶು ಜನನ ಎಂಬ ವರದಿ ಕುರಿತು: ವರದಿಯಲ್ಲಿರುವಂತೆ, ಶಿಶುವಿಗೆ ತುರ್ತಾಗಿ ಯೋಗ್ಯ ಚಿಕಿತ್ಸೆಗೆ ವ್ಯವಸ್ಥೆ ಮಾಡಿ ಇಲ್ಲಿನ ವೈದ್ಯರು ಮೆಚ್ಚುವಂಥ ರೀತಿಯಲ್ಲಿ ಕರ್ತವ್ಯ ನಿರ್ವಹಿಸಿದ್ದಾರೆ. ಕೋಡಿಹಿಪ್ಲಿನ ಡಾ. ಪೈ ಮತ್ತು ಡಾ. ಸುಕನ್ಯ ಅವರುಗಳೂ ಕೂಡ ರಾತ್ರಿ ಅಷ್ಟೊತ್ತಿನವರೆಗೂ ಕೆಲಸ ಮಾಡಿ ಮಗು ಉಳಿಯಲು ಕಾರಣರಾಗಿದ್ದಾರೆಂದು ತಿಳಿಯಿತು.

ಒಂದು ಕಾಲದಲ್ಲಿ ಕೊಪ್ಪ ಆಸ್ಪತ್ರೆಗೆ ದಾಖಲಾಗುವುದಕ್ಕೇ ಹಿಂದೆ ಮುಂದೆ ನೋಡಬೇಕಾಗಿತ್ತು. ಇಂಥ ಸ್ಥಿತಿಯಲ್ಲಿ, ಈ ರೀತಿ ಉತ್ತಮ ರೀತಿಯಲ್ಲಿ ಕೆಲಸ ನಿರ್ವಹಿಸಿದ ಈ ಎಲ್ಲ ವೈದ್ಯರು ಮತ್ತು ಅವರ ಸಿಬ್ಬಂದಿಗಳಿಗೂ ಅಭಿನಂದನೆ ಸಲ್ಲಿಸುತ್ತೇವೆ.

—ನಾಗರೀಕರು

ಕೊಪ್ಪ. (೫ ಮಂದಿ ಸಹಿ ಇದೆ)

'ನನ್ನ ಸ್ವಾಭಿಮಾನಕ್ಕೆ ಅಡ್ಡ ಬರಬೇಡಿ'

(೧ನೇ ಪುಟದಿಂದ)

"ಸಂಘ ಊಟ ಕೊಡುತ್ತಾ? ಅಂತ ಕೇಳುವವರೇ. ೩೩ ವರ್ಷದಿಂದ ಎಲ್ಲರಿಗೂ ಊಟ, ಮನೆ, ಮಾನ ಮರ್ಯಾದೆಯ ಜೀವನ ಕೊಟ್ಟಿದ್ದೀರಾ?.... ಸಂಘ ಊಟ ಕೊಡುವುದಿಲ್ಲ. ಆದರೆ, ನಾವು ದುಡಿದ ಭತ್ತ, ಅಡಿಕೆ, ಕಾಫಿ ಎಲ್ಲ ಎಲ್ಲಿಗೆ, ಯಾರ ಸುಖದ ಸುಸ್ಪತ್ತಿಗೆಗೆ ಹೋಗುತ್ತೆ? ಅನ್ನುವುದು ಪ್ರಶ್ನೆ.

"ಸಂಘ ಯಾರನ್ನೂ ಹೊಗಳಲು, ಬೈಯಲು ಅಲ್ಲ—ನಮ್ಮನ್ನು ಸಂಘಟಿಸಲು, ನ್ಯಾಯಕ್ಕಾಗಿ ಹೋರಾಡಲು ಅದು.

"ಎಲ್ಲ ಅವಮಾನ ಸಹಿಸಿ, ದುಡಿದು ಯಾರಿಗೂ ಮೋಸ ಮಾಡದೆ ಬದುಕಿದ್ದೇವೆ. ನಮ್ಮ ಸ್ವಾಭಿಮಾನಕ್ಕೆ ಗೌರವಕ್ಕೆ ದಯಮಾಡಿ ಅಡ್ಡ ಬರಬೇಡಿ.

"ಸರ್ಕಾರದ ಅಂಕಿ ಅಂಶಗಳ ಪ್ರಕಾರವೇ ಈ ದೇಶದಲ್ಲಿ ೧೯೭೩ರಿಂದೀಚೆಗೆ ೮೦ ಸಾವಿರ ದಲಿತರ ಕೊಲೆಯಾಗಿದ್ದಾರೆ. ಅವರು ಯಾವ ಮೋಕ್ಷ ಪದವಿಗಾಗಿಯೂ ಹೋರಾಡಿ ಸಾಯಲಿಲ್ಲ—ನ್ಯಾಯವಾದ ಕೂಲಿ ಕೇಳಿದ್ದಕ್ಕಾಗಿ ಸತ್ತರು. ಇಂದಿರಾ ಗಾಂಧಿ ಕಣ್ಣೀರು ಹಾಕ್ತಾಳೆ; ೫೦೦ ರೂ ಕೊಡ್ತೀವಿ ಅಂತಾಳೆ. ಹೋದ ಜೀವ ಬರುತ್ತಾ? ಅದರ ಬದಲು. ತಾಕತ್ತಿದ್ದರೆ. ಗುಂಡಿನಿಂದ ಕೊಂದವನನ್ನು ಗಲ್ಲಿಗೇರಿಸು.

"[illegible] ಮಠ [illegible] ಎಂಬ [illegible] ಮಗ [illegible] ಸ್ಕೂಲಿನಲ್ಲಿ ಚೆನ್ನಾಗಿ ಓದಿ ಮೊದಲ ಸ್ಥಾನ ಪಡೆದ [illegible] ಮಗ ಫೇಲ್ ಆದ ಇಷ್ಟಕ್ಕೇ ಅವನು ಅವನನ್ನು ಕೊಂದು ಅದನ್ನು 'ಆತ್ಮಹತ್ಯೆ' ಎಂದು ಪೋಲೀಸರು ದಾಖಲು ಮಾಡಿ ಪ್ರಕರಣ ಮುಚ್ಚಿಹಾಕಿದರು. ಇಂಥ [illegible] ಸ್ಥಿತಿಯಲ್ಲಿ ಮಂತ್ರಿ ಶಾಸಕರುಗಳು ನಮ್ಮನ್ನು ಉದ್ಧಾರ ಮಾಡುವುದಿಲ್ಲ; ಮೋಸ ಮಾಡ್ತಾರೆ. ನಮ್ಮನ್ನು ನಾವು ಉದ್ಧಾರ ಮಾಡಿಕೊಳ್ಳಬೇಕು.

"ಬೆಂಗಳೂರಲ್ಲಿ [illegible] ಕೊಟ್ಟಿದ್ದಾರೆ. ಇನ್ನು ಮೂರು ವರ್ಷಗಳಲ್ಲಿ ಅಸ್ಪೃಶ್ಯತೆ ಹೋದೀತು [illegible] ನಾವು ಕೇಳುತ್ತೇವೆ- (೧) ಅಸ್ಪೃಶ್ಯತೆ ಅಲ್ಲ; ಜಾತಿ ಪದ್ಧತಿ ನಿರ್ಮೂಲನ ಮಾಡ್ತೀವಿ ಅಂತ [illegible] (೨) ವರ್ಷಗಳಿಗೆ ೧೦ ವರ್ಷ [illegible] ಮನೆಗೆ ಹೋಗಿ ಜಾತಿ ಪದ್ಧತಿ [illegible] ಪ್ರಚಾರ ಮಾಡಿ, ಅವರಲ್ಲಿ ಊಟ ಮಾಡಿ."

ಬಡವರಿಗೆ. ನಿಜವಾಗಿ [illegible] ಭೂಮಿಗಾಗಿ ಹೋರಾಡಬೇಕು. ಭೂಮಿ ಇದ್ದರೆ ನಾವು ಯಾರಿಗೂ ಗುಲಾಮರಾಗಿ ಇರಬೇಕಾಗಿಲ್ಲ.

ಅನ್ಯಾಯ ಕನ್ನಡಕ್ಕೆ, ಸಂಸ್ಕೃತಕ್ಕಲ್ಲ

ಮಾನ್ಯರೆ,

ತಮ್ಮ ಪತ್ರಿಕೆಯ ೨೮-೩-೮೩ರ ಸಂಚಿಕೆಯಲ್ಲಿ ಪ್ರಕಟವಾದ 'ಈ ಅನ್ಯಾಯವೇಕೆ' ಎಂಬ ಸಂಸ್ಕೃತಾಭಿಮಾನಿ ಎಂ. ಎಸ್. ಸತೀಶರ ಪ್ರಶ್ನೆಗೆ ಈ ಉತ್ತರ.

ಪತ್ರದಲ್ಲಿ ಶ್ರೀಯುತರು ತಮ್ಮ ವಾದವನ್ನು ಮಂಡಿಸುತ್ತಾ, ಕನ್ನಡದ ಮೂಲದ ಬಗ್ಗೆ ಪ್ರಸ್ತಾಪ ಮಾಡಿ, ಈಗ ಕನ್ನಡದಲ್ಲಿ ಮುದ್ರಣವಾಗಿರುವಂತಹ ಶಾಸ್ತ್ರ ಪುರಾಣೇತ್ಯಾದಿಗಳು ಸಂಸ್ಕೃತದಿಂದ ಬಂದಿದ್ದು ಎಂದಷ್ಟೇ ಹೇಳಿರುವುದರಿಂದ, ಕನ್ನಡದ ಮೂಲ ಸ್ಪಷ್ಟವಾಗುವುದಿಲ್ಲ. ಕನ್ನಡ ಮತ್ತು ಸಂಸ್ಕೃತ ಭಾಷೆಗಳು, ಎರಡು ಬೇರೆ ಬೇರೆ ಜನಾಂಗದ ಭಾಷೆಗಳಾಗಿದ್ದರಿಂದ ಎರಡೂ ಭಾಷೆಗಳ ಮೂಲವನ್ನು ತಿಳಿಯಲು ಯತ್ನಿಸೋಣ.

ಇಂದು ನಮ್ಮ ದೇಶದ ಯಾವುದೇ ರಾಜ್ಯದಲ್ಲೂ, ಸಂಸ್ಕೃತವನ್ನೇ ಆಡುವ ಭಾಷೆಯಾಗಿ ಬಳಸಿಕೊಳ್ಳುತ್ತಿರುವವರು ಪ್ರಾಯಶಃ ಯಾರೂ ಇಲ್ಲ. ಮಗುವಿಗೆ ಮಾತು ಕಲಿಸುವಾಗಲೇ ಸಾಮಾನ್ಯವಾಗಿ ಎಲ್ಲಾ ತಾಯಿ-ತಂದೆಯರೂ ತಮ್ಮ ಮಾತೃ ಭಾಷೆಯಲ್ಲೇ ಮಾತು ಕಲಿಸುತ್ತಾರೆ. ಈ ರೀತಿ ಮಕ್ಕಳಿಗೆ ಮಾತು ಕಲಿಸುವಾಗಲೇ ಸಂಸ್ಕೃತವನ್ನು ಕಲಿಸುವಂಥವರು ಭಾರತದಲ್ಲಿಯೇ ಯಾರೂ ಇದ್ದಂತಿಲ್ಲ. ಯಾವ ರಾಜ್ಯದಲ್ಲಿಯೇ ಆಗಲಿ, ಆ ರಾಜ್ಯದ ಮಾತೃ ಭಾಷೆಯೇ ಪ್ರಥಮ ಸ್ಥಾನದಲ್ಲಿ ಇರಬೇಕು. ಅಂದಾಗ ಸಂಸ್ಕೃತ ಭಾಷೆಯು ಯಾವುದೇ ರಾಜ್ಯದ ಮಾತೃ ಭಾಷೆಯ ಸ್ಥಾನವನ್ನು ಆಕ್ರಮಿಸಲಾರದು. ಅಂದರೆ ಸಂಸ್ಕೃತವು ಭಾರತದಲ್ಲಿ ಈಗಾಗಲೇ ಆಗಿಹೋಗಿರಬಹುದಾದ ಒಂದು ಜನಾಂಗದ ಭಾಷೆ ಎಂದಾಯಿತು. ಹಾಗಿದ್ದಲ್ಲಿ ಆ ಜನಾಂಗ ಯಾವುದು? ಎಂಬ ಪ್ರಶ್ನೆ ಸಹಜವಾಗಿಯೇ ಉದ್ಭವಿಸುತ್ತದೆ. ಇದಕ್ಕೆ ಇತಿಹಾಸವನ್ನು ಅಭ್ಯಸಿಸಿದರೆ ಉತ್ತರ ದೊರೆಯುತ್ತದೆ.

ಕೆಲವು ಸಾವಿರ ವರ್ಷಗಳ ಕೆಳಗೆ ಏಷ್ಯಾ ಖಂಡದ ಉತ್ತರ ಭಾಗದಿಂದ, ಭಾರತಕ್ಕೆ ವಲಸೆ ಬಂದಂತಹ ಆರ್ಯರಿಗೆ, ಇಲ್ಲಿನ ಮೂಲ ನಿವಾಸಿಗಳಾದ ದ್ರಾವಿಡರೊಂದಿಗೆ, ಯುದ್ಧ ಮಾಡಬೇಕಾದ ಪ್ರಮೇಯವಿತ್ತು. ಯುದ್ಧ ವಿದ್ಯೆಯಲ್ಲಿ ಆರ್ಯರು ದ್ರಾವಿಡರಿಗಿಂತ ಹೆಚ್ಚು ಮುಂದುವರಿದವರಾದ್ದರಿಂದ ಉತ್ತರ ಭಾರತದಲ್ಲಿ ನೆಲೆಸುವುದು ಕಷ್ಟವಾಗಿ ದ್ರಾವಿಡರು ದಕ್ಷಿಣದ ಕಡೆಗೆ ಬಂದರು. (ಆರ್ಯರು ಇಲ್ಲಿನ ಮೂಲ ನಿವಾಸಿಗಳಾದ ದ್ರಾವಿಡರನ್ನು 'ರಾಕ್ಷಸ' ರೆಂದೂ, ತಮ್ಮನ್ನು 'ದೇವ'ರೆಂದೂ ಕರೆದುಕೊಳ್ಳುತ್ತಿದ್ದರು.) ಆರ್ಯರು ಭಾರತಕ್ಕೆ ಬಂದಾಗ ಲಿಪಿ ಇನ್ನೂ ಬಳಕೆಗೆ ಬಂದಿರಲಿಲ್ಲ. ಕೆಲವು ವರ್ಷಗಳ ನಂತರ ಲಿಪಿಗಳನ್ನು ಕಂಡು ಹಿಡಿದರಲ್ಲದೆ, 'ದೇವನಾಗರಿಲಿಪಿ' ಎಂಬುದಾಗಿ ಕರೆದರು. ತಾವು ಆಡುತ್ತಿದ್ದ ಭಾಷೆಯನ್ನು ದೇವಭಾಷೆ ಅಥವಾ 'ಸಂಸ್ಕೃತ' ಎನ್ನುತ್ತಿದ್ದರು. ಉತ್ತರ ಭಾರತದ ಕೆಲವು ಭಾಷೆಗಳ ಲಿಪಿಗಳಲ್ಲಿ ದೇವನಾಗರಿ ಲಿಪಿಯ ಪ್ರಭಾವ ಇದೆ. ಇಂದು ದಕ್ಷಿಣದ ರಾಜ್ಯಗಳಲ್ಲಿ ಬಳಕೆಯಲ್ಲಿರುವ ತೆಲುಗು, ತಮಿಳು, ಮಲೆಯಾಳ ಮತ್ತು ಕನ್ನಡ ಭಾಷೆಗಳು ದ್ರಾವಿಡ ಮೂಲದಿಂದ ಬಂದವುಗಳು. ಇವು ಪ್ರತ್ಯೇಕವಾದ ಲಿಪಿಗಳನ್ನು ಹೊಂದಿವೆ.

ಕನ್ನಡದಲ್ಲಿ ಅರ್ಧ-ಭಾಗ ಸಂಸ್ಕೃತದ ಪದಗಳೇ ಇವೆ. ಸಂಸ್ಕೃತದ ಸಹಾಯವನ್ನು ಹೀರಿ ಕನ್ನಡ ಬೆಳೆದಿದೆಎಂಬುದಾಗಿಯೂ, ಎಂ. ಎಸ್. ಸತೀಶ್‌ರವರು ಬರೆದಿದ್ದಾರೆ. ಈ ಮಾತಿಗೂ ಸಾಕಷ್ಟು ಪುಷ್ಟಿ ದೊರಕುವುದಿಲ್ಲ. ಏಕೆಂದರೆ ಇಂದು ಕರ್ನಾಟಕದಲ್ಲಿ, ಬ್ರಾಹ್ಮಣರ ಹೊರತಾಗಿ ಉಳಿದವರು ಆಡುವ ಮಾತುಗಳನ್ನು ಗಮನಿಸಿದರೆ, ಅವರಾಡುವ ಭಾಷೆಯಲ್ಲಿ ಸಂಸ್ಕೃತ ಶಬ್ದಗಳು ಬಹಳ ಕಮ್ಮಿ. ಬ್ರಾಹ್ಮಣರಾಡುವ ಮಾತುಗಳಲ್ಲಿ ಒಂದಿಷ್ಟು ಸಂಸ್ಕೃತ ಪದಗಳ ಬಳಕೆ ಕಾಣಸಿಗುತ್ತದೆ. ಇಲ್ಲಿ ಇನ್ನೂ ಒಂದು ಅಂಶವನ್ನು ನಾವು ಗಮನಿಸಬೇಕಾಗುತ್ತದೆ. ಇಂದು ಕರ್ನಾಟಕದಲ್ಲಿ ವಾಸಿಸುತ್ತಿರುವ ಮಠಾಧಿಪತಿಗಳಾಗಲೀ, ಬ್ರಾಹ್ಮಣರಾಗಲೀ ಶುದ್ಧ ಆರ್ಯರೂ ಅಲ್ಲ, ಶುದ್ಧ ದ್ರಾವಿಡರೂ ಅಲ್ಲ. ಇವರು ಆರ್ಯರೊಂದಿಗೆ ಸಂಕರಕ್ಕೊಳಗಾಗಿರುವ ದ್ರಾವಿಡರು. ಶೂದ್ರರಿಗೆ ವೇದಾಧ್ಯಯನದ ಹಕ್ಕಿಲ್ಲವೆಂದು ಕಟ್ಟು-ಪಾಡು ಮಾಡಿಕೊಂಡಿದ್ದರಿಂದಲೂ, ಶೂದ್ರರೊಂದಿಗೆ ಸಂಬಂಧ ಬೆಳೆಸಿಕೊಳ್ಳದೆ ದೂರ ಇಟ್ಟಿದ್ದರಿಂದಲೂ ಬ್ರಾಹ್ಮಣರಾಡುವ ಭಾಷೆ ಹೆಚ್ಚು ಸುಸಂಸ್ಕೃತವಾಗುವುದು ಸಾಧ್ಯವಾಗಿದೆ ಅಷ್ಟೆ. ಪತ್ರದಲ್ಲಿ ಒಂದು ಕಡೆ ಸಂಸ್ಕೃತವನ್ನು [illegible], ನಮ್ಮ ಭಾಷೆಗೆ ಅನ್ಯಾಯವಾಗುತ್ತಿರುವಾಗ ಎಂದು ಸಂಬೋಧಿಸಿದ್ದಾರೆ. ವಾಸ್ತವವಾಗಿ ಕನ್ನಡ ನಾಡಿನಲ್ಲಿ ವಾಸಿಸುತ್ತಿರುವ ನಮ್ಮೆಲ್ಲರ ಭಾಷೆ ಕನ್ನಡವೇ ಹೊರತು ಸಂಸ್ಕೃತವಲ್ಲ. ಸಂಸ್ಕೃತ ಕೇವಲ ಆರ್ಯರ ಭಾಷೆ. ಸಂಸ್ಕೃತ ಪ್ರಥಮ ಭಾಷೆಯಾದ್ದರಿಂದ ಅದು ತನ್ನ ನಾಡಿಗೆ ತಾನಿರುವುದಿಲ್ಲ. ಕನ್ನಡದ ಸ್ಥಾನವನ್ನು ಆಕ್ರಮಿಸುತ್ತದೆ. [illegible] ಶಿಕ್ಷಣದವರಿಗೆ ಕನ್ನಡವು ಪ್ರಥಮ ಭಾಷೆಯಾಗಬೇಕಾಗಿರುವುದು ಮಾತ್ರವಲ್ಲ, ಕಡ್ಡಾಯವೂ ಆಗಬೇಕಾಗುತ್ತದೆ. ಅಂದ ಮಾತ್ರಕ್ಕೆ ಸಂಸ್ಕೃತವನ್ನೇನೂ ನಮ್ಮ ರಾಜ್ಯದಿಂದ ಹೊರಹಾಕಬೇಕೆಂದು ನಾನು ಬಯಸುವುದಿಲ್ಲ. ಡಾ. ದೇ. ಜವರೇಗೌಡರು ಒಂದು ಕಡೆ ಹೇಳಿದಂತೆ, ರಾಮಾಯಣ, ಮಹಾಭಾರತ, ಭಗವದ್ಗೀತೆ, ವಾಲ್ಮೀಕಿ [illegible] ಮುಂತಾದವುಗಳು ಹಿಂದಿನ ಕಾಲದ [illegible] ಸಾಮಾಜಿಕ, ಆರ್ಥಿಕ ಜೀವನ [illegible] ವನ್ನು ತಿಳಿಸುತ್ತದೆ. ಅವುಗಳನ್ನು ತಿಳಿಯಲಿಕ್ಕಾದರೂ ನಾವು ಸಂಸ್ಕೃತ ಕಲಿಯಬೇಕಾಗುತ್ತದೆ. ಅದ್ದರಿಂದ ಸಂಸ್ಕೃತ ಎರಡನೆಯದೋ ಮೂರನೆಯದೋ ಭಾಷೆಯಾಗಿ ಇದ್ದರೆ, ನಮ್ಮ ಅಭ್ಯಂತರವಿಲ್ಲ. ಆದರೆ ಈಗ ಕರ್ನಾಟಕದ ಶಿಕ್ಷಣ ಕ್ಷೇತ್ರದಲ್ಲಿ ಕನ್ನಡ ಪ್ರಥಮ ಭಾಷೆಯಾಗಬೇಕಾದ ಅಗತ್ಯ ಇದೆ. ಇದಕ್ಕಾಗಿ [illegible] 'ಕನ್ನಡ [illegible] ಹೋರಾಟ ಸಮಿತಿ' [illegible] ಸಂಘಟನೆಗಳು ಪ್ರಯತ್ನಿಸುತ್ತಿವೆ. ನಾವೂ ಅವುಗಳೊಂದಿಗೆ [illegible] ಕಾಲ ಕಡ್ಡಾಯ ಇದೆ. [illegible] ಕನ್ನಡ ನಮ್ಮ ಉಸಿರು [illegible].

—[illegible]

ಚುನಾವಣೆ ಕಣಕ್ಕೆ ರೈತಸಂಘ?

ಶೃಂಗೇರಿ: ಸರ್ಕಾರ ಈವರೆಗೆ ರೈತರ ಬೇಡಿಕೆಗಳನ್ನು ಈಡೇರಿಸದೆ ಇರುವುದರಿಂದ ಮುಂಬರುವ ಸ್ಥಳೀಯ ಸಂಸ್ಥೆಗಳ ಹಾಗೂ ಸಾರ್ವತ್ರಿಕ ಚುನಾವಣೆಗಳಲ್ಲಿ ರೈತಸಂಘದ ಪ್ರತಿನಿಧಿಗಳನ್ನು ನಿಲ್ಲಿಸಬೇಕೆಂದು ನಿರ್ಧರಿಸಲಾಗಿದೆ. ಮಾ. ೧೫ರಂದು ಜಿಲ್ಲಾ ರೈತಸಂಘದ ಅಧ್ಯಕ್ಷ ಟಿ. ಆರ್. ಶಂಕರ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಇಲ್ಲಿ ನಡೆದ ಕ್ಷೇತ್ರದ ಮೂರೂ ತಾಲೂಕುಗಳ ರೈತ ಸಂಘಗಳ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದೆ. ಇದಕ್ಕೆ ರಾಜ್ಯ ರೈತ ಸಂಘದ ಅನುಮತಿಯನ್ನು ಪಡೆಯಲಾಗುವುದು.

ರೈತ ಸಂಘದ ಕಾರ್ಯಕ್ರಮವನ್ನು ಪ್ರತಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಪ್ರಚಾರಗೊಳಿಸಲು ಸಮಿತಿ ರಚಿಸಲೂ ತೀರ್ಮಾನಿಸಲಾಯಿತು.

ನೀರಿನ ದರ–ಸೌದೆ–ಸೊಪ್ಪಿನ ಬೆಟ್ಟ

ಸದರಿ ಸಭೆಯಲ್ಲೂ ಹಾಗೂ ಏ. ೫ರಂದು ನಡೆದ ತಾ॥ಕಾರ್ಯಕಾರಿಣಿ ಸಭೆಯಲ್ಲೂ ತೆಗೆದುಕೊಂಡ ಇತರ ನಿರ್ಣಯಗಳು: ೧) ರೈತರಿಗೆ ಸ್ವಂತ ಬಳಕೆಗಾಗಿ ಸರ್ಕಾರಿ ಕಾಡಿನಿಂದ ಒಣ ಕಟ್ಟಿಗೆ ತರಲು ನಿರ್ಬಂಧ ಹೇರಬಾರದೆಂದು ಸರ್ಕಾರವನ್ನು ಕೋರುವುದು. (೨) ಮಳೆಗಾಲದ ಹೊರತು ಬೇರೆ ಸಮಯದಲ್ಲಿ ನೀರಿನ ಅನುಕೂಲತೆಯಿಲ್ಲದಿರುವುದರಿಂದ ಸರ್ಕಾರ ವಿಧಿಸುವ ಅವೈಜ್ಞಾನಿಕವಾದ ನೀರಿನ ತೆರಿಗೆಯ ಬಗ್ಗೆ ರಾಜ್ಯ ರೈತ ಸಂಘದ ಮೂಲಕ ಹೈಕೋರ್ಟ್ ತಡೆಯಾಜ್ಞೆ ಪಡೆಯುವುದು; (೩) ಹಿಂದೆ ಸೊಪ್ಪಿನ ಬೆಟ್ಟ ಮತ್ತು ಗೋಮಾಳವೆಂದು ನಿಗದಿ ಪಡಿಸಿದ್ದ ಪ್ರದೇಶವನ್ನು ಈ ತಾಲೂಕಿನಲ್ಲಿ ಅರಣ್ಯ ಇಲಾಖೆಗೆ ವಹಿಸಿಕೊಡುತ್ತಿರುವುದಕ್ಕೆ ಶ್ರೇಷ್ಠ ನ್ಯಾಯಾಲಯದಿಂದ ತಡೆಯಾಜ್ಞೆ ಪಡೆಯುವುದು.

ಅಕ್ರಮವಾಗಿ ಸಾಗಿಸುತ್ತಿದ್ದ ಸಾರಾಯಿ ವಶ

ಕೊಪ್ಪ: ಪರವಾನಿಗೆಯಿಲ್ಲದೆ ಶೃಂಗೇರಿಯಿಂದ ನ. ರಾ. ಪುರಕ್ಕೆ ಲಾರಿಯಲ್ಲಿ ಸಾಗಿಸುತ್ತಿದ್ದ ಮೂರು ಸಾವಿರ ಲೀಟರ್ ಸಾರಾಯಿಯನ್ನು ಶಿಗದಾಳಿನ ಹತ್ತಿರ ಕೊಪ್ಪ ತಹಸೀಲ್ದಾರ್ ಹೆಚ್. ಎಂ. ನಾಗಪ್ಪ ಅವರು ಪತ್ತೆ ಹಚ್ಚಿ ಲಾರಿ ಸಮೇತ ಪೋಲೀಸರ ವಶಕ್ಕೆ ಒಪ್ಪಿಸಿದ್ದು, ಕೊಪ್ಪ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಪುಟ್ಟಸ್ವಾಮಿ ಗೌಡರು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಲಾರಿ (ಎಂ. ವೈ ಎಕ್ಸ್ ೭೪೯೮) ಶಿವಮೊಗ್ಗದ ಬಿ. ಮೋಹನದಾಸ್ ನಾಯಕ್ ರದೆಂದೂ, ಸಾರಾಯಿ ಸತೀಶ್‌ಚಂದ್ರ ಅಂಡ್ ಕಂಪನಿಯವರಿಗೆ ಸೇರಿದ್ದೆಂದೂ ಪೋಲೀಸ್ ವರದಿ ತಿಳಿಸಿದೆ.

ತುಂಗಾ ನದಿಯಲ್ಲಿ ಮುಳುಗಿ ಸಾವು

ನಾರ್ವೆ: ಇಲ್ಲಿಗೆ ಸಮೀಪದ ಆರ್ಡಿ ಕೊಪ್ಪದ ನಿವಾಸಿ ಅಬ್ಬಾ ಸಾಹೇಬ್ ಎಂಬುವವರು ಏ. ೮ ರಂದು ತುಂಗಾನದಿಯಲ್ಲಿ ಸ್ನಾನ ಮಾಡುವಾಗ ನೀರಲ್ಲಿ ಬಿದ್ದು ಮರಣ ಹೊಂದಿರುವುದಾಗಿ ತಿಳಿದುಬಂದಿದೆ.

ಹೆಂಡತಿ ಚಿಕಿತ್ಸೆಗಾಗಿ ಆಸ್ಪತ್ರೆಗೆ ಹೋಗಿದ್ದಾಗ ಚಿಕ್ಕ ಮಗುವಿನೊಂದಿಗೆ ಬಟ್ಟೆ ಒಗೆದು ಸ್ನಾನ ಮಾಡಿ ಬರಲು ಹೋಗಿದ್ದ ಅವರು ಅಕಸ್ಮಾತ್ ಹೊಳೆಯಲ್ಲಿ ಬಿದ್ದುದಾಗಿಯೂ ಮಗು ಅಳುವುದು ಗಮನಿಸಿದವರು ಹೋಗಿ ನೋಡುವಾಗ ಅವರ ಪ್ರಾಣ ಹಾರಿ ಹೋಗಿತ್ತೆಂದೂ ತಿಳಿದು ಬಂದಿದೆ.

ಕೊಪ್ಪ ಪೋಲೀಸರು ಮಹಜರು ನಡೆಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಸಂಪಾದಕ, ಪ್ರಕಾಶಕ ಮತ್ತು ಮುದ್ರಕ:
ಸಿರಿಮನೆ ನಾಗರಾಜ್.
ಅಚ್ಚು: ನೇಸರ ಮುದ್ರಣ, ಕೊಪ್ಪ.

ಜಾತ್ರೆ, ಉತ್ಸವ, ವಾರ್ಷಿಕೋತ್ಸವ

ಕುದ್ರೆಗುಂಡಿ

ಇಲ್ಲಿನ ಶ್ರೀ ವಿನಾಯಕ ಯುವಕ ರೈತ ಸಂಘದ ವಾರ್ಷಿಕೋತ್ಸವ ಮಾ. ೨೮ ರಂದು ಪಿ. ಜಿ. ಗುರ್ಜರ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಕೆ. ವಿಜಯಅಜಿಲ ಮುಖ್ಯ ಅತಿಥಿಗಳಾಗಿದ್ದರು. ಕೊಪ್ಪ ತಹಸೀಲ್ದಾರ್ ಹೆಚ್. ಎಂ. ನಾಗಪ್ಪ ಸಮಾರೋಪ ಭಾಷಣ ಮಾಡಿದರು.

ಹೆಚ್. ಎಸ್. ಕೃಷ್ಣಕುಮಾರ್ ಸ್ವಾಗತಿಸಿದರು, ಎ. ಎಲ್. ಮೋಹನರಾವ್ ವರದಿ ಓದಿದರು. ಹೆಚ್. ವಿ. ಚಕ್ರಪಾಣಿ ವಂದಿಸಿದರು. ಕೊನೆಯಲ್ಲಿ ಮನರಂಜನೆ ಕಾರ್ಯಕ್ರಮ ನಡೆಯಿತು. (ವರದಿ: ಎ. ಎಲ್. ಎಂ. ರಾವ್)

ಉರೂಸು

ಇಲ್ಲಿನ ಸೈಯದ್ ಸಾಬಾತ್ ಔಲಿಯರವರ ದರ್ಗಾದಲ್ಲಿ ಉರೂಸು ಕಾರ್ಯಕ್ರಮವು ಏ. ೬ ರಂದು ಭಕ್ತ ಸಡಗರಗಳಿಂದ ನೆರವೇರಿತು.

ಹರಿಹರಪುರ

ಇಲ್ಲಿನ ರಾಷ್ಟ್ರೋತ್ಥಾನ ಬಳಗದ ಆಶ್ರಯದಲ್ಲಿ ಏ. ೨ ರಂದು ರಾಮನವಮಿ ಉತ್ಸವವು ಹ. ಪ. ಗಣಪತಿ ಪ್ರಭುಗಳ ಅಧ್ಯಕ್ಷತೆಯಲ್ಲಿ ನಡೆಯಿತು.

ಕು| ಕೃಪಾರಿಂದ ಪ್ರಾರ್ಥನೆಯ ನಂತರ ಬಿ. ಕೆ. ಗಣೇಶ್ ಸ್ವಾಗತಿಸಿದರು. ಗೀತ ಸಂಧ್ಯಾ ಕಾರ್ಯಕ್ರಮದಲ್ಲಿ ಶ್ರೀಮತಿ ಮಹಾಲಕ್ಷ್ಮಿ ರಾಘವೇಂದ್ರರಾವ್, ಕು| ಸುಮಲತಾ ಮತ್ತು ಕು| ಜಯಲಕ್ಷ್ಮಿಯವರಿಂದ ಸಂಗೀತ ಗೋಷ್ಠಿ ನಡೆಯಿತು.

ಮಾ. ೨೩ರಂದು ಬಳಗದ ಉದ್ಘಾಟನಾ ಸಮಾರಂಭದಲ್ಲಿ ನಡೆದ ಗೀತಸ್ಪರ್ಧೆಯಲ್ಲಿ ಗೆದ್ದ ಮಕ್ಕಳಿಗೆ ಬಹುಮಾನ ಹಂಚಲಾಯ್ತು. ಸಿ ಎಸ್ ಛಾಯಾಪತಿ ವಂದಿಸಿದರು.

ಕೊಪ್ಪ

ಇಲಿನ ಪ್ರಬೋಧಿನಿ ಶಿಶುಮಂದಿರದ ವಾರ್ಷಿಕೋತ್ಸವ ಹೆಚ್. ಜಿ. ಗೋವಿಂದೇಗೌಡರ ಅಧ್ಯಕ್ಷತೆಯಲ್ಲಿ ಏ. ೨ರಂದು ನಡೆಯಿತು.

ಪೋಷಕರ ಪರವಾಗಿ ಶ್ರೀಮತಿ ಯಶೋದ ಕುಮಾರ್ ಮಾತನಾಡಿದರು. ಸ. ವಿದ್ಯಾಧಿಕಾರಿ ಎಂ. ಚಂದ್ರಶೇಖರಯ್ಯ ಬಹುಮಾನ ಹಂಚಿದರು. ಸರ್ಕಾರದ ಸಹಾಯಧನವಿಲ್ಲದೆ ಪೋಷಕರ ನೆರವಿನಿಂದಲೇ ನಡೆಯುತ್ತಿರುವ ಶಾಲೆಯ ಬಗ್ಗೆ ಗೋವಿಂದೇಗೌಡರು ತಮ್ಮ ಸಂತೋಷ ವ್ಯಕ್ತಪಡಿಸಿದರು.

ಶಿಶು ವಿಹಾರದ ಮಕ್ಕಳಿಂದ ವಿವಿಧ ಕಾರ್ಯಕ್ರಮಗಳು ನಡೆದವು. ಕಾರ್ಯದರ್ಶಿ ಶ್ರೀನಿವಾಸರಾವ್ ವರದಿ ಓದಿದರು. ಖಜಾಂಚಿ ಬಿ. ಎಸ್. ಶ್ರೀನಿವಾಸರಾವ್ ವಂದಿಸಿದರು. (ವರದಿ: ಎಂ. ಆರ್. ಭಾಸ್ಕರ್.)

ರಥೋತ್ಸವ

ಕೊಪ್ಪ: ಇಲ್ಲಿನ ವೀರಭದ್ರೇಶ್ವರ ದೇವಸ್ಥಾನದ ರಥೋತ್ಸವ ಏ. ೮ ರಂದು ವೈಭವದಿಂದ ನೆರವೇರಿತು. ರಾತ್ರಿ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ರಂಗಶ್ರೀ ಕಲಾವಿದರು "ಎಲ್ ಬಿ ಡಬ್ಲ್ಯು" ಎಂಬ ನಾಟಕ ಆಡಿದರು. ಏ. ೯ ರ ರಾತ್ರಿ ಪಲ್ಲಕ್ಕಿ ಉತ್ಸವ ನಡೆಯಿತು.

ತೆಂಗಿನಮನೆ

ಇಲ್ಲಿನ ಹಿ. ಪ್ರಾ. ಶಾಲೆ ಕಲಾಜ್ಯೋತಿ ಮಂಡಳಿ ಹಾಗೂ ರಾಘವೇಂದ್ರ ಯುವ ಕಲಾ ಸಂಘ ಇವುಗಳ ವಾರ್ಷಿಕೋತ್ಸವ ಏ. ೮ ರಂದು ನಡೆಯಿತು. ಬಿ. ಜಿ. ದಿಸಂಬರ್ ಅಧ್ಯಕ್ಷತೆ ವಹಿಸಿದ್ದರು. ಯುವತಿ ಮಂಡಳಿ ಉದ್ಘಾಟನೆಯನ್ನು ಶ್ರೀಮತಿ ಸಾವಿತ್ರಮ್ಮ ನೆರವೇರಿಸಿದರು. ಸಮಾರೋಪ ಭಾಷಣವನ್ನು ಎಂ. ಚಂದ್ರಶೇಖರಯ್ಯ, ಸಹಾಯಕ ವಿದ್ಯಾಧಿಕಾರಿಗಳು ಕೊಪ್ಪ ಇವರು ಮಾಡಿದರು. ಮುಖ್ಯ ಅತಿಥಿಗಳಾಗಿ ತಾ॥ ಯುವಜನ ಒಕ್ಕೂಟದ ಅಧ್ಯಕ್ಷ ಹೆಚ್. ಸಿ. ಶ್ರೀಧರ್ ಬಂದಿದ್ದು, ಕೆ. ಬಾಲಣ್ಣಗೌಡ, ಕ್ಷೇತ್ರಾಭಿವೃದ್ಧಿ ಅಧಿಕಾರಿ, ಕೊಪ್ಪ. ಇವರು ಬಹುಮಾನ ವಿತರಣೆ ಮಾಡಿದರು.

(ವರದಿ ನ. ಸುರೇಶ್)

ಅಂದಗಾರು

ಇಲ್ಲಿನ ಶ್ರೀಲಕ್ಷ್ಮಿ ನಾರಾಯಣಸ್ವಾಮಿ ದೇವಸ್ಥಾನದ ಮಹಾ ರಥೋತ್ಸವ ಏ. ೨ ರಂದು ನಡೆಯಿತು.

ರಾತ್ರಿ ಕೊಪ್ಪದ 'ಅಂಕುರ' ಬಳಗದವರಿಂದ ನಾಟಕ ಕಾರ್ಯಕ್ರಮವಿತ್ತು. ಇಡೀ ರಾತ್ರಿ ವಿದ್ಯುದ್ದೀಪ ಇಲ್ಲದ್ದರಿಂದ ಪೆಟ್ರೋಮ್ಯಾಕ್ಸ್ ಬೆಳಕಿನಲ್ಲಿಯೇ 'ಸಾಯೋ ಆಟ' ಮತ್ತು 'ಕುಂಟಾ ಕುಂಟಾ ಕುರವತ್ತಿ' ಎಂಬ ಎರಡು ನಾಟಕಗಳನ್ನು ಬಳಗದವರು ಅಭಿನಯಿಸಿದರು.

ಪಂಚಾಯತ್ ರಾಜ್ ಮಂತ್ರಿ ಬೇ. ರಾಮಯ್ಯ ಏ. ೧೬ರಂದು ಕುದ್ರೆಗುಂಡಿ ಗ್ರಾಮಪಂಚಾಯ್ತಿಗೆ ಭೇಟಿ ಕೊಡುವರು

ಅಡಿಕೆ ಬೆಳೆಗಾರರ ಸಂಘಕ್ಕೆ ವಾರಣಾಸಿ ಸುಬ್ರಾಯಭಟ್ಟರ ಭೇಟಿ

ಕೊಪ್ಪ: ಇಲ್ಲಿನ ಚಿಕ್ಕಮಗಳೂರು ಜಿಲ್ಲಾ ಅಡಿಕೆ ಬೆಳೆಗಾರರ ಸಂಘಕ್ಕೆ ಮಂಗಳೂರಿನ ಕ್ಯಾಂಪ್ಕೊ ಸೊಸೈಟಿಯ ಅಧ್ಯಕ್ಷರಾದ ವಾರಣಾಸಿ ಸುಬ್ರಾಯ ಭಟ್ಟರು ಏ. ೧೮ರ ಭಾನುವಾರ ಭೇಟಿ ನೀಡಿ, ಬೆಳೆಗಾರರನ್ನು ಸಂದರ್ಶಿಸಿ ಮಾತನಾಡಲಿರುವರು. ಅಡಿಕೆ ಬೆಳೆಗಾರರು ಸಮಾರಂಭದಲ್ಲಿ ಭಾಗವಹಿಸಿ, ಚರ್ಚೆಯ ಪ್ರಯೋಜನ ಪಡೆಯಬೇಕೆಂದು ಸಂಘದ ಕಾರ್ಯದರ್ಶಿಗಳು ವಿನಂತಿಸಿದ್ದಾರೆ.

ಕೇರಂ ಟೂರ್ನಿ ಫಲಿತಾಂಶ

ಕೊಪ್ಪ: ಇಲ್ಲಿನ ಬ್ಯಾಂಕರ್ಸ್ ರಿಕ್ರಿಯೇಶನ್ ಕ್ಲಬ ನವರು ನಡೆಸಿದ ಕೊಪ್ಪ ಟೌನ್ ಮಟ್ಟದ ಕೇರಂ ಟೂರ್ನಿಯಲ್ಲಿ ಸಿಂಗಲ್ಸ್‌ನಲ್ಲಿ ನಿಸಾರ್ ಅಹಮದ್ ವಿರುದ್ಧ ಬಿ. ಜಿ. ಗಣೇಶ ೨೯–೧, ೨೯–೧೬ ರಲ್ಲೂ, ಡಬಲ್ಸ್‌ನಲ್ಲಿ ನಸ್ರುಲ್ಲಾ ಶರೀಫ್ ಮತ್ತು ಸುರೇಶ್ ನಾಯಕ್ ವಿರುದ್ಧ ವೈ. ಆರ್. ಸುರೇಶ್ ಮತ್ತು ಬಿ. ಜಿ. ಗಣೇಶ್ ೨೯–೬, ೨೯–೧೨ ರಲ್ಲೂ ಗೆದ್ದಿದ್ದಾರೆ.

ಕೊಪ್ಪಕ್ಕೆ ಹಾಲಿನ ಡೈರಿ: –ಬೇಗಾನೆ

ಶೃಂಗೇರಿ ಈ ಕ್ಷೇತ್ರದ ಮೂರು ತಾಲೂಕುಗಳಿಗೆ ಕೇಂದ್ರವಾಗಿ ಕೊಪ್ಪದಲ್ಲಿ ಕ್ಷೀರ ಸಂಸ್ಕರಣ ಕೇಂದ್ರವನ್ನೂ, ಬಾಳೆಹೊನ್ನೂರಿನಲ್ಲಿ ಸಂಗ್ರಹಣಾಗಾರವನ್ನೂ ಸ್ಥಾಪಿಸಲುವ ಬಗ್ಗೆ ಸರ್ಕಾರ ಆಲೋಚಿಸುತ್ತಿದೆಯೆಂದು ಬೇಗಾನೆ ರಾಮಯ್ಯನವರು ಏ. ೫ರಂದು ಇಲ್ಲಿ ತಿಳಿಸಿದರು.

ಅವರು ವ್ಯವಸಾಯ ಇಲಾಖೆ ಏರ್ಪಡಿಸಿದ್ದ ಸಮಾರಂಭದಲ್ಲಿ ಉತ್ತಮ ರೈತರಿಗೆ ಬಹುಮಾನವನ್ನೂ ಗಿರಿಜನರಿಗೆ ಕೃಷಿ ಉಪಕರಣಗಳನ್ನೂ ಹಂಚಿ ಮಾತನಾಡುತ್ತಿದ್ದರು.

ತಾ. ಅ. ಮಂ. ಅಧ್ಯಕ್ಷ ಡಿ. ಕಳಸಪ್ಪ ಹೆಗ್ಡೆ ಅಧ್ಯಕ್ಷತೆ ವಹಿಸಿದ್ದರು. ಸ. ಕೃಷಿ ನಿರ್ದೇಶಕ ಮುದ್ದಲಿಂಗೇಗೌಡ ಸ್ವಾಗತಿಸಿದರು. ಈಶ್ವರಪ್ಪ ವರದಿ ಓದಿದರು. ಆರ್. ಎಲ್. ನಡವಾಳ ವಂದಿಸಿದರು.

ಮನೆ ಮಾರಾಟಕ್ಕಿದೆ

ಕೊಪ್ಪದ ಮೇಲಿನಪೇಟೆ ಗಣಪತಿ ದೇವಸ್ಥಾನದ ಎದುರು ಮುಖ್ಯ ರಸ್ತೆಯ ಪಕ್ಕದಲ್ಲಿ ನೀರು, ವಿದ್ಯುಚ್ಛಕ್ತಿ ಮುಂತಾದ ಸೌಲಭ್ಯಗಳುಳ್ಳ, ವಾಸಕ್ಕೆ ಯೋಗ್ಯವಾದ ಮನೆ ಮಾರಾಟಕ್ಕಿದೆ. ಆಸಕ್ತಿಯುಳ್ಳವರು ವಿಚಾರಿಸಿ:

ಹೆಚ್. ವಿ. ಶ್ರೀವತ್ಸ,
ಹೇರೂರು, ಕೊಪ್ಪ ತಾ॥.
ಚಿಕ್ಕಮಗಳೂರು ಜಿಲ್ಲೆ.